# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 1001

**ಸದಸ್ಯರ ಹೆಸರು** : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)

**ಉತ್ತರಿಸುವ ದಿನಾಂಕ** : 14.03.2025

**ಉತ್ತರಿಸುವ ಸಚಿವರು** : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ವಿ.ವಿ. ಸಿಂಡಿಕೇಟ್ ಸಭೆ ತೀರ್ಮಾನದಂತೆ 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ'ಕ್ಕೆ ಕೊಟ್ಟಿರುವ 4.2 ಎಕರೆ ಜಾಗಕ್ಕೆ ರಾಜ್ಯ ಸರ್ಕಾರದ ಅನುಮತಿ ಸಿಕ್ಕಿ ಕೇಂದ್ರದ ಹೆಸರಿಗೆ ಮಂಜೂರಾತಿ ಆಗಿದೆಯೇ: ಹಾಗಿದ್ದಲ್ಲಿ, ಮಂಜೂರಾತಿ ಪತ್ರದ ಪ್ರತಿ ನೀಡುವುದು: ಇಲ್ಲದಿದ್ದಲ್ಲಿ, ಸೂಕ್ತ ಕಾರಣಗಳನ್ನು ತಿಳಿಸುವುದು: | ಮೈಸೂರು ವಿ.ವಿ. ಸಿಂಡಿಕೇಟ್ ಸಭೆ ತೀರ್ಮಾನದಂತೆ "ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಕೊಟ್ಟಿರುವ 4.2 ಎಕರೆ ಜಾಗವು ಕೇಂದ್ರದ ಹೆಸರಿಗೆ ಮಂಜೂರಾತಿ ಆಗಿರುವುದಿಲ್ಲ. ಆದ್ದರಿಂದ, ಮಂಜೂರಾತಿ ಪತ್ರ ಲಭ್ಯವಿರುವುದಿಲ್ಲ.<br>ಸೂಕ್ತ ಕಾರಣಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| (ಆ) | ನಿವೇಶನ ನೋಂದಣಿಯಾಗದ ಕಾರಣ ಈವರೆವಿಗೂ ಕೇಂದ್ರಕ್ಕೆ ಸ್ವಾಯತ್ತತೆ ಸ್ಥಾನಮಾನ ದೊರೆತಿಲ್ಲ ಎನ್ನುವುದು ನಿಜವೇ: | ಕೇಂದ್ರದ ಹೆಸರಿಗೆ ಸ್ಥಳ/ನಿವೇಶನ ನೋಂದಣಿಯಾದ ನಂತರ ಸ್ವಾಯತ್ತ ಸ್ಥಾನಮಾನ ಪಡೆಯುವ ಸಂಬಂಧ ಕ್ರಮವಹಿಸಲಾಗುವುದು. |
| ಇ) | ಹಾಗಿದ್ದಲ್ಲಿ, ಪ್ರಾಚೀನ ಇತಿಹಾಸ ಹೊಂದಿರುವ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತು 15 ವರ್ಷಗಳೂ ಕಳೆದರೂ ಸ್ವಂತ ನಿವೇಶನವೂ ಇಲ್ಲ, ಕಟ್ಟಡವೂ ಇಲ್ಲದ ಈ ಕಾರಣಕ್ಕೆ ಸ್ವಾಯತ್ತತೆಯೂ ದೊರೆತಿಲ್ಲದಿರುವ ಬಗ್ಗೆ ಕೇಂದ್ರಕ್ಕೆ ನಿವೇಶನ/ಕಟ್ಟಡ ಒದಗಿಸುವಲ್ಲಿ ಹಾಗೂ ಸ್ವಾಯತ್ತ ಸಂಸ್ಥೆ ಸ್ಥಾನಮಾನ ದೊರಕಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಈವರೆವಿಗೂ ಕೈಗೊಂಡ ಕ್ರಮಗಳೇನು; | ಕೇಂದ್ರದ ಹೆಸರಿಗೆ ನಿವೇಶನ/ಸ್ಥಳ ನೊಂದಣಿ ಮಾಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಈ ಪ್ರಕ್ರಿಯೆ ಮುಗಿದ ನಂತರದಲ್ಲಿ ಸ್ವಾಯತ್ತ ಸ್ಥಾನಮಾನ ಪಡೆಯಲು ಕ್ರಮ ವಹಿಸಲಾಗುವುದು. ಈ ಬಗ್ಗೆ ಈವರೆಗೆ ಕೈಗೊಂಡಿರುವ ಕ್ರಮಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಈ) | ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ದಕ್ಕಿಸುವ ಸಲುವಾಗಿ ಒತ್ತಾಯಿಸಿ ಬರೆದ ಪತ್ರಗಳ ಪ್ರತಿಗಳನ್ನು ನೀಡುವುದು; | ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕರು, ಈಗಾಗಲೇ ದಿನಾಂಕ: 02-06-2020 ರಂದು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ) |

| | | |
|---|---|---|
| ಉ) | ಮೈಸೂರಿನಿಂದ ಬೆಂಗಳೂರಿಗೆ 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ'ವನ್ನು ಸ್ಥಳಾಂತರಿಸಲು ಕೇಂದ್ರ ಅಥವಾ ರಾಜ್ಯ ಸರ್ಕಾರ ಉದ್ದೇಶಿಸಿದೆಯೇ: ಇದ್ದಲ್ಲಿ, ಕಾರಣಗಳೇನು: (ಸಂಪೂರ್ಣ ವಿವರ ನೀಡುವುದು) | ಮೈಸೂರಿನಿಂದ ಬೆಂಗಳೂರಿಗೆ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಸ್ಥಳಾಂತರಿಸಲು ಕೇಂದ್ರ ಅಥವಾ ರಾಜ್ಯ ಸರ್ಕಾರ ಉದ್ದೇಶಿಸಿರುವ ಬಗ್ಗೆ ಯಾವುದೇ ಪತ್ರ ವ್ಯವಹಾರಗಳು ನಡೆದಿರುವುದಿಲ್ಲ. |
| (ಊ) | ಸದರಿ ಅಧ್ಯಯನ ಕೇಂದ್ರದ ಕಚೇರಿಯನ್ನು ಮೈಸೂರಿನಲ್ಲಿಯೇ ಸ್ಥಾಪಿಸಲು ರಾಜ್ಯ ಸರ್ಕಾರದ ಅನುಮತಿ ಇದೆಯೇ? | ಪ್ರಸ್ತುತ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಕಚೇರಿಗಾಗಿ ಮೈಸೂರು ವಿಶ್ವವಿದ್ಯಾನಿಲಯವು ಗುತ್ತಿಗೆ ಆಧಾರದಲ್ಲಿ ನೀಡಿರುವ ಮಾನಸಗಂಗೋತ್ರಿಯ ಎನ್.ಸಿ.ಹೆಚ್.ಎಸ್. ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. |

**ಸಂಖ್ಯೆ**.ಕಸಂವಾ 30 ಕೆಒಎಲ್ ಆಕ 2025

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅನುಬಂಧ – ೦೧

ಸಮೃದ್ಧ ಸಾಹಿತ್ಯವನ್ನು ಹೊಂದಿರುವ ಭಾರತದ ಅತ್ಯಂತ ಪ್ರಾಚೀನ ಭಾಷೆಗಳಲ್ಲಿ ಒಂದಾದ ಕನ್ನಡ ಭಾಷೆಗೆ ಭಾರತ ಸರ್ಕಾರವು ೩೧-೧೦-೨೦೦೮ ರಂದು ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಘೋಷಿಸಿತು. ಈ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಸಂಪುಟವು ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಕೇಂದ್ರವನ್ನು (CESCK) ಮೈಸೂರಿನಲ್ಲಿರುವ ಭಾರತೀಯ ಭಾಷಾ ಸಂಸ್ಥಾನದಲ್ಲಿ (CIIL) ಸ್ಥಾಪಿಸಲು ಅನುಮೋದನೆ ನೀಡಿರುತ್ತದೆ. ಅದರಂತೆ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ **ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಕೇಂದ್ರವನ್ನು** ತೆರೆದು ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಮತ್ತು ಸಂಶೋಧನಾ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕೇಂದ್ರವು ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕರ ಅಧೀನದಲ್ಲಿ ಭಾರತ ಮಾನವ ಸಂಪನ್ಮೂಲ ಸಚಿವಾಲಯ ನೇಮಿಸಿರುವ ಯೋಜನಾ ನಿರ್ದೇಶಕರ ಮೂಲಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದ್ದಾರೆ.

ಪ್ರಸ್ತುತ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಕಚೇರಿಗಾಗಿ ಮೈಸೂರು ವಿಶ್ವವಿದ್ಯಾನಿಲಯವು ಗುತ್ತಿಗೆ ಆಧಾರದಲ್ಲಿ ನೀಡಿರುವ ಮಾನಸಗಂಗೋತ್ರಿಯ NCHS ಕಟ್ಟಡದಲ್ಲಿ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ. ಅಲ್ಲದೆ ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರದ ಚಟುವಟಿಕೆಗಳ ವಿಸ್ತರಣೆಗೆ ಅಗತ್ಯವಾದ ೪ ಎಕರೆ ೨ ಗುಂಟೆ ಜಮೀನನ್ನು ಕೂಡ ಮೈಸೂರು ವಿಶ್ವವಿದ್ಯಾನಿಲಯವು ಮಂಜೂರು ಮಾಡಿಕೊಟ್ಟಿದ್ದು ಇದನ್ನು ಭಾರತೀಯ ಭಾಷಾ ಸಂಸ್ಥಾನದ ಹೆಸರಿಗೆ ನೋಂದಣಿ ಮಾಡಿಸಲು ಅನುಮೋದನೆ ಕೋರಿ ಭಾರತೀಯ ಭಾಷಾ ಸಂಸ್ಥಾನದ (CIIL) ನಿರ್ದೇಶಕರು ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳಿಗೆ ದಿನಾಂಕ: ೦೨-೦೬-೨೦೨೦ ರಂದು ಪತ್ರ ಬರೆದಿರುತ್ತಾರೆ (ಪ್ರತಿ ಲಗತ್ತಿಸಿದೆ)

ಈ ಹಿನ್ನೆಲೆಯಲ್ಲಿ ಸರಿಸುಮಾರು ಕನ್ನಡ ಭಾಷೆಯೊಂದಿಗೆ ಶಾಸ್ತ್ರೀಯ ಸ್ಥಾನಮಾನ ಪಡೆದ ತಮಿಳು ಭಾಷೆಗೆ ತನ್ನದೇ ಆದ CENTRAL INSTITUTE OF CLASSICAL TAMIL (CICT) ಕೇಂದ್ರ ಸ್ಥಾಪಿಸಲು ಮತ್ತು ಈ ಕೇಂದ್ರವು ಭಾರತ ಸರ್ಕಾರದ ಅನುದಾನಿತ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಅನುಮೋದನೆ ನೀಡಿರುವಂತೆ ಕರ್ನಾಟಕ ರಾಜ್ಯದ ಮೈಸೂರಿನಲ್ಲಿ ಸ್ಥಾಪಿತವಾಗಿರುವ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಕೇಂದ್ರಕ್ಕೂ ಕೂಡ ಶಾಸ್ತ್ರೀಯ ಸ್ವಾಯತ್ತ ಸಂಸ್ಥೆ ಸ್ಥಾನಮಾನ ನೀಡಲು ಕೋರಿ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕರು, ಈಗಾಗಲೇ ದಿನಾಂಕ: ೦೨-೦೬-೨೦೨೦ ರಂದು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ನಂತರದಲ್ಲಿ, ದಿನಾಂಕ ೦೭-೦೫-೨೦೨೨ ರಂದು ಕರ್ನಾಟಕ ಸರ್ಕಾರದ ಅಂದಿನ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು ಮೈಸೂರಿನಲ್ಲಿರುವ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಭೇಟಿ ನೀಡಿ ಕೇಂದ್ರದ ಅಂದಿನ ಯೋಜನಾ ನಿರ್ದೇಶಕರಾಗಿದ್ದ ಪ್ರೊ.ಬಿ.ಶಿವರಾಮ ಶೆಟ್ಟಿ ಇವರೊಂದಿಗೆ ಚರ್ಚಿಸಿದ ಸಂದರ್ಭದಲ್ಲಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಿಂದ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರಗಳ ಚಟುವಟಿಕೆಗಳಿಗೆ ಅಂದರೆ ಶಾಸ್ತ್ರೀಯ ಭಾಷಾ ಅಧ್ಯಯನ ಮತ್ತು ಸಂಶೋಧನಾ ಯೋಜನೆಗಳಿಗೆ ಮಾತ್ರ ಅನುದಾನವನ್ನು ಒದಗಿಸಲಾಗುತ್ತದೆ. ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ವೆಚ್ಚಗಳಿಗೆ ಅನುದಾನ ನೀಡಲು ಅವಕಾಶ ಇರುವುದಿಲ್ಲ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ಪಡೆಯಬೇಕಾದರೆ ಕೇಂದ್ರವು ತನ್ನದೇ ಆದ ಸ್ವಂತ ಕಟ್ಟಡ ಹೊಂದಿರಬೇಕೆಂಬ ನಿಯಮವನ್ನು ಪೂರ್ಣಗೊಳಿಸಬೇಕಾಗಿದ್ದು, ರಾಜ್ಯ ಸರ್ಕಾರದಿಂದ ಈ ವ್ಯವಸ್ಥೆಯನ್ನು ಕಲ್ಪಿಸುವ ಸಾಧ್ಯತೆಗಳ ಬಗ್ಗೆ ಪರಿಶೀಲಿಸಿದ ಮಾನ್ಯ ಸಚಿವರು ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯಲ್ಲಿ ಪ್ರಸ್ತುತ ಜಾನಪದ ವಸ್ತು ಸಂಗ್ರಹಾಲಯವಾಗಿ ಬಳಕೆಯಾಗುತ್ತಿರುವ (ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗದ ಮುಖ್ಯ ಆಡಳಿತ ಕಚೇರಿಯಾಗಿದ್ದ) ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡವನ್ನು ಎಂ.ಒ.ಯು ಮೂಲಕ ರಾಜ್ಯ ಸರ್ಕಾರದ ವಶಕ್ಕೆ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ) ಪಡೆದುಕೊಂಡು ಆ ಕಟ್ಟಡದ ಸಂಪೂರ್ಣ ನವೀಕರಣಕ್ಕೆ ಅಗತ್ಯವಾದ ಅನುದಾನವನ್ನು ರಾಜ್ಯ ಸರ್ಕಾರದಿಂದ ಭರಿಸಲು ಕ್ರಮ ಕೈಗೊಳ್ಳಲಾಗುವುದೆಂದು ಇದಕ್ಕೆ ಅಗತ್ಯವಾದ ಪ್ರಸ್ತಾವನೆಯನ್ನು ಸಿದ್ಧಪಡಿಸಬೇಕೆಂದು ಮಾನ್ಯ ಕನ್ನಡ ಸಂಸ್ಕೃತಿ ಇಲಾಖೆ ಸಚಿವರು ಸೂಚಿಸಿರುತ್ತಾರೆ.

ಮುಂದುವರೆದಿದೆ..

ಈ ಸಮಯದಲ್ಲಿ ಹಾಜರಿದ್ದ ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಹೇಮಂತ್ ಕುಮಾರ್ ಅವರು ಸದರಿ ಕಟ್ಟಡವನ್ನು ಕರ್ನಾಟಕ ರಾಜ್ಯ ಸರ್ಕಾರದಿಂದ ನವೀಕರಣ ಮಾಡಿಸಿ ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ತೆರೆಯಲು ಬಳಸಿಕೊಳ್ಳುವುದಾದರೆ ಮೈಸೂರು ವಿಶ್ವವಿದ್ಯಾನಿಲಯವು ಎಂ.ಓ.ಯು ಮೂಲಕ ನೀಡಲು ಸಿದ್ಧವಿದೆ ಎಂದು ಈ ಸಂಬಂಧವಾಗಿ ರಾಜ್ಯ ಸರ್ಕಾರದಿಂದ (ಕನ್ನಡ ಸಂಸ್ಕೃತಿ ಇಲಾಖೆಯಿಂದ) ಪ್ರಸ್ತಾವನೆ ಬಂದಲ್ಲಿ ನಿಯಮಾನಸಾರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ.

ಮುಂದುವರೆದು ದಿನಾಂಕ ೨೧.೦೨.೨೦೨೩ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಈ ಸಂಸ್ಥೆಯನ್ನು ಪ್ರತಿನಿಧಿಸುವ ಕುಲ ಸಚಿವರು ಒಂದನೇ ಪಕ್ಷವಾಗಿಯೂ ಮತ್ತು ಕರ್ನಾಟಕ ಸರ್ಕಾರದ ಪರವಾಗಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಪರವಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ಇವರು ಎರಡನೇ ಪಕ್ಷವಾಗಿಯೂ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡವನ್ನು ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರ ಸ್ಥಾಪಿಸಲು ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದ್ದು, ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡವನ್ನು ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಇವರಿಂದ ಇಲಾಖೆಗೆ ಹಸ್ತಾಂತರ ಪಡೆಯುವ ಸಂಬಂಧ ಮುಂದಿನ ನಿರ್ದೇಶನ ಕೋರಿ ದಿನಾಂಕ ೨೨/೦೨/೨೦೨೩ ರಂದು ಮಾನ್ಯ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರಿಗೆ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ಇವರಿಂದ ಪತ್ರ ಬರೆಯಲಾಗಿತ್ತು. (ಪತ್ರದ ಪ್ರತಿಯನ್ನು ಲಗತ್ತಿಸಿದೆ)

ಈ ಹಿನ್ನೆಲೆಯಲ್ಲಿ ಮಾನ್ಯ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರು ದಿನಾಂಕ ೨೭.೦೬.೨೦೨೩ ರಂದು ಸರ್ಕಾರದ ಕಾರ್ಯದರ್ಶಿಗಳಿಗೆ ಪತ್ರ ಬರೆದು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಂದ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಸ್ತಾಂತರಿಸಿಕೊಳ್ಳಲು ಅನುಮೋದನೆ ಕೋರಿದ್ದರು. (ಪತ್ರದ ಪ್ರತಿಯನ್ನು ಲಗತ್ತಿಸಿದೆ)

ಮುಂದುವರೆದು, ದಿನಾಂಕ ೦೬-೦೯-೨೦೨೩ ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು "ಜಯಲಕ್ಷ್ಮಿ ವಿಲಾಸ ಅರಮನೆ" ಕಟ್ಟಡವನ್ನು ಒಡಂಬಡಿಕೆ ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಶಕ್ಕೆ ಪಡೆಯಲು ಅನುಮತಿ ನೀಡಿದ ಹಿನ್ನೆಲೆಯಲ್ಲಿ ದಿನಾಂಕ ೨೫-೦೯-೨೦೨೩ ರಂದು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ಇವರಿಂದ ನಿರ್ದೇಶಕರು, ಭಾರತೀಯ ಭಾಷಾ ಸಂಸ್ಥಾನ, ಶಿಕ್ಷಣ ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ, ಭಾರತ ಸರ್ಕಾರ, ಮೈಸೂರು ಇವರಿಗೆ ಪತ್ರ ಬರೆದು "ಜಯಲಕ್ಷ್ಮಿ ವಿಲಾಸ ಅರಮನೆ" ಕಟ್ಟಡವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಶಕ್ಕೆ ಪಡೆಯಲು ಸರ್ಕಾರ ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಮುಂದಿನ ಕ್ರಮಕ್ಕಾಗಿ ಹಾಗೂ ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತ ಸ್ಥಾನಮಾನ ಪಡೆಯುವ ಸಂಬಂಧ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅಗತ್ಯವಿರುವ ದಾಖಲೆಗಳನ್ನು ಸಲ್ಲಿಸಲು ಕೋರಿದ್ದು, (ಪತ್ರದ ಪ್ರತಿಯನ್ನು ಲಗತ್ತಿಸಿದೆ.) ಸಂಬಂಧಪಟ್ಟ ದಾಖಲೆಗಳನ್ನು ಸದರಿ ಸಂಸ್ಥೆಯವರು ಒದಗಿಸಿದ ತಕ್ಷಣ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗುವುದು.

10.02.24

(ಡಾ.ಎಂ.ಡಿ.ಸುದರ್ಶನ್)
ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಮೈಸೂರು ಜಿಲ್ಲೆ, ಮೈಸೂರು

दूरवाणी/Phones : 0821-2345006
निदेशक / Director : 0821-2515820
फैक्स (सामान्य) / Fax: 0821-2515032

वेब साइट /Website : http://www.ciil.org
ई-मेल / Email : ada-ciilmys@gov.in

भारत सरकार/ Government of India
मानव संसाधन विकास मंत्रालय/ Ministry of Human Resource Development
उच्चतर शिक्षा विभाग / Department of Higher Education
भारतीय भाषा संस्थान / Central Institute of Indian Languages
मानसगंगोत्री, हुणसूर रोड, मैसूर –570006 / Manasagangotri, Hunsur Road, MYSURU- 570006

F. No. 1/11-253/2016/Estt/CESCK Speed Post Dated: 02-06-2020

To,

The Secretary to the Govt. of India
Department of Higher Education
Ministry of Human Resource Development
Shastri Bhawan,
New Delhi-110 001.

Subject: Proposal for Establishing the Central Institute of Classical Kannada, (CICK), Mysore, Karnataka, India

Sir,

I am to state that the Union Government accorded the Kannada language the classical status on 31-10-2008. Further, the Central Cabinet approved setting up the Centre of Excellence for Studies in Classical Kannada (CESCK), as a scheme at Central Institute of Indian Languages (CIIL), Mysuru. This was the first step, but was surely a crucial and enabling step, for taking appropriate action to promote Classical Kannada studies and support both basic & applied research in the area. The Centre has done considerable work under the said scheme.

The Classical Language Centre has a great role to play in spreading the Classical Language and the literature filled with inherent values across the globe. The scope needs to be widened to achieve the specified objective. It is felt appropriate for establishment an Institution dedicated to the study of Classical Kannada which would offer doctoral, Post-doctoral and Research program, support the publication of Classical Kannada works, serve as a clearing house of information pertaining to Classical Kannada. The present proposal for establishing Central Institute of Classical Kannada is

Contd....2

a step in the direction. The existing CESCK at CIIL will be subsumed in the proposed establishment of CICK. Thus, the activities of the Centre need to be extended on a large scale in different dimensions and in this regard it is essential to set up a National Institute of eminence for Classical Kannada Studies as an independent entity. The proposal is for the establishment of a Central Autonomous Institution at the National level for promoting Classical Kannada Studies in the name of "Central Institute of Classical Kannada" (CICK) in Mysuru, Karnataka, India. The proposal is on the lines of the establishment of the 'Central Institute of Classical Tamil' (CICT) as a Central autonomous Institution which was also a scheme under CIIL before its establishment as a Central autonomous Institute.

The CESCK is situated at Mysuru, an ideal place with Academic, Cultural and Geographical ambiance. With this in mind, the CIIL approached the University of Mysore with a request for allotment of suitable land for the Classical Kannada Language Centre, with the futuristic idea for establishing the said Centre as an independent entity with autonomous status. The University of Mysore in a proactive manner immediately allotted a building temporarily for the Centre. The CESCK Centre was shifted to the building provided temporarily by the University of Mysore on 19-02-2018 and since then, the Centre has been functioning from the said premises.

The proposal has the full support of Government of Karnataka. A high-level committee under the chairmanship of Hon'ble Minister of Kannada and Culture met on 3rd October 2019 at the Department of Kannada & Culture and discussed about the Centre and the grant of autonomous status to the Centre by the Central Government. The committee was unanimous in its decision that all efforts should be made to obtain Autonomous status to CESCK for the growth and development of the Classical Kannada language at a faster pace. Presently, with the concurrence of the State Government, the University of Mysore has approved allotment of 3 acres land along with an existing building for a period of 30 years to the Centre on lease basis.

The proposal is covered under Niti Aayog. The establishment of Central Institute of Classical Kannada (CICK) requires the appraisal of Committee on Establishment of Expenditure (CEE) with combined Expenditure Finance Committee (EFC) for obtaining the approval of the Cabinet or Committee of Cabinet, as a very special case keeping in view the position indicated above. I am enclosing a self-contained proposal along with

Contd....3

the draft notes containing the proposal for appraisal of CEE and EFC for establishing the Central Scheme of 'Central Institute of Classical Kannada' as an autonomous institution along with Detailed Project Report (DPR) & other related documents. The details of the list of documents attached to this reference.

Thus, the Setting up of the Central Institute of Classical Kannada would be landmark in the preservation of ancient Indian heritage. It is expected that the total effect of the activities of the Centre in particular the research in this area would be the much-needed encouragement for studies in composite nature of Indian culture, civilization and heritage.

Therefore, I am to request you kindly to take up the matter further for the appraisal of CEE and EFC and obtaining the approval of the Cabinet or Committee of Cabinet in this regard.

Thanking you,

Yours faithfully,

(D.G.Rao)
Director

निदेशक/Director
भारतीय भाषा संस्थान
Central Institute of Indian Languages
मैसूर/MYSORE-570 006

सत्यमेव जयते

# INDIA NON JUDICIAL

## Government of Karnataka

Rs. 200

e-Stamp

| | | |
|---|---|---|
| Certificate No. | : | IN-KA86096550962762V |
| Certificate Issued Date | : | 17-Feb-2023 02:11 PM |
| Account Reference | : | NONACC (FI)/ kaksfcl08/ K R MOHALLA/ KA-MY |
| Unique Doc. Reference | : | SUBIN-KAKAKSFCL0862234829508880V |
| Purchased by | : | THE REGISTRAR UNIVERSITY OF MYSURU |
| Description of Document | : | Article 12 Bond |
| Description | : | AGREEMENT |
| Consideration Price (Rs.) | : | 0 (Zero) |
| First Party | : | THE REGISTRAR UNIVERSITY OF MYSURU |
| Second Party | : | DIRECTOR KANNADA AND CULTURE DEPARTMENT BANGALORE |
| Stamp Duty Paid By | : | THE REGISTRAR UNIVERSITY OF MYSURU |
| Stamp Duty Amount(Rs.) | : | 200 (Two Hundred only) |

[redacted]

IN-KA86096550962762V RS. 200 17-FEB-2023 02:11 PM

Please write or type below this line

ಒಡಂಬಡಿಕೆ

ಈ ಒಡಂಬಡಿಕೆಯನ್ನು ದಿನಾಂಕ ಎರಡು ಸಾವಿರದ ಇಪ್ಪತ್ತಮೂರನೇ ಇಸವಿಯ ಫೆಬ್ರುವರಿ ಮಾಹೆಯ ಇಪ್ಪತ್ತೊಂದನೆ ತಾರೀಖಿನಂದು ಮೈಸೂರಿನಲ್ಲಿ ಮಾಡಲಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಈ ಸಂಸ್ಥೆಯನ್ನು ಪ್ರತಿನಿಧಿಸುವ ಕುಲಸಚಿವರು ಇವರು ಒಂದನೇ ಪಕ್ಷವಾಗಿಯೂ

ಮತ್ತು

ಕರ್ನಾಟಕ ಸರ್ಕಾರದ ಪರವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಅಥವಾ ಇವರ ಪರವಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ಇವರನ್ನು ಎರಡನೇ ಪಕ್ಷವಾಗಿ ಮಾಡಲಾಗಿರುತ್ತದೆ.

ಕುಲಸಚಿವ

ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಮೈಸೂರು ಜಿಲ್ಲೆ -570005



Statutory Alert:
1. The authenticity of this Stamp certificate should be verified at 'www.shcilestamp.com' or using e-Stamp Mobile App of Stock Holding. Any [illegible] Certificate and as available on the website / Mobile App renders it invalid.
2. The onus of checking the legitimacy is on the users of the certificate.
3. In case of any discrepancy please inform the Competent Authority.

ಪ್ರಸ್ತಾವನೆ:

ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಸ್ವಾಯತ್ತ ಸಂಸ್ಥೆಯಾಗಿ ರೂಪಿಸಿ ನಡೆಸಲು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರ ಸೂಚನೆಯಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ದಿನಾಂಕ 02-06-2022 ರಂದು ಬರೆದ ತಮ್ಮ ಪತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಆವರಣದಲ್ಲಿರುವ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡವನ್ನು ರಾಜ್ಯ ಸರ್ಕಾರದ ಕನ್ನಡ ಭಾಷೆಯ ಅತ್ಯುನ್ನತ ಅಧ್ಯಯನ ಕೇಂದ್ರದ ಸ್ಥಾಪನೆಗೆ ನೆರವಾಗುವಂತೆ ಒಡಂಬಡಿಕೆ ಮಾಡಿಕೊಳ್ಳುವಂತೆ ಕೋರಿದ್ದ ಮೇರೆಗೆ ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎದುರುಗಡೆ ಇರುವ ಪ್ರಸ್ತುತ ವಸ್ತು ಸಂಗ್ರಹಾಲಯವಾಗಿ ಬಳಕೆಯಾಗುತ್ತಿರುವ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡವನ್ನು ಒಡಂಬಡಿಕೆ ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನೀಡಲು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ದಿನಾಂಕ 11-07-2022ರ ಸಭೆಯಲ್ಲಿ ಒಪ್ಪಿಗೆ ನೀಡಿದೆ ಎಂದು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸದರಿ ಕಟ್ಟಡವನ್ನು ಈ ಮುಂದಿನ ಷರತ್ತುಗಳಿಗೆ ಒಪ್ಪಿ ಮಾಡಿಕೊಂಡಿರುವ ಒಡಂಬಡಿಕೆ.

1. ಮೇಲೆ ತಿಳಿಸಿದಂತೆ ಮೊದಲನೇ ಪಕ್ಷವಾಗಿರುವ ಕುಲಸಚಿವರು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೇಲೆ ತಿಳಿಸಿದ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎದುರು ಇರುವ ಜಯಲಕ್ಷ್ಮಿವಿಲಾಸ ಅರಮನೆ ಕಟ್ಟಡದ (ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಸ್ವತ್ತು) ಮೂಲ ವಾರಸುದಾರರಾಗಿದ್ದು, ಈ ಒಡಂಬಡಿಕೆಯ ಮೂಲಕ ಸದರಿ ಷೆಡ್ಯೂಲ್ ಸ್ವತ್ತನ್ನು ಮೇಲೆ ತಿಳಿಸಿದ ಎರಡನೇ ಪಕ್ಷವಾಗಿರುವ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ತೆರೆಯಲು ಒಡಂಬಡಿಕೆ ಮೂಲಕ ದಿನಾಂಕ 29.09.2022 ರಂದು ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿರುತ್ತಾರೆ.

2. ಷೆಡ್ಯೂಲ್ ಸ್ವತ್ತನ್ನು ಮೈಸೂರು ವಿಶ್ವವಿದ್ಯಾನಿಲಯವು ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಸ್ವಾಯತ್ತ ಸಂಸ್ಥೆಯಾಗಿ ರೂಪಿಸಿಕೊಳ್ಳಲು ಒಡಂಬಡಿಕೆ ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನೀಡುತ್ತಿರುವ ಮಾನಸ ಗಂಗೋತ್ರಿಯಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎದುರಿನ ಆವರಣದಲ್ಲಿರುವ ಜಯಲಕ್ಷ್ಮಿ ವಿಲಾಸ ಅರಮನೆಯ ಕಟ್ಟಡ ( ಬ್ಲಾಕ್ 1, 2 ಮತ್ತು 3 ಸೇರಿದಂತೆ) ಅಧ್ಯಯನಕ್ಕಾಗಿ ಮೀಸಲಿಟ್ಟಿರುವ ನಿಗದಿತ ಆವರಣ ಮಾತ್ರವೇ ಈ ಒಡಂಬಡಿಕೆಗೆ ಅನ್ವಯವಾಗುವ ಷೆಡ್ಯೂಲ್ ಸ್ವತ್ತು.

3. ಷೆಡ್ಯೂಲ್ ಸ್ವತ್ತನ್ನು (ಜಯಲಕ್ಷ್ಮೀ ವಿಲಾಸ ಅರಮನೆ, ಮಾನಸ ಗಂಗೋತ್ರಿ, ಮೈಸೂರು) ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರದ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಮೂವತ್ತು ವರ್ಷಗಳ ಅವಧಿಗೆ ಮಾಹೆಯಾನ ರೂ.1000/-ಗಳ ಲೈಸೆನ್ಸ್ ಶುಲ್ಕದೊಂದಿಗೆ ಒಡಂಬಡಿಕೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ.

4. ಒಡಂಬಡಿಕೆ ಕರಾರಿನ ಅವಧಿಯಲ್ಲಿ ಈ ಕಟ್ಟಡದ ಒಳಗೆ ಬಳಸುವ ನೀರಿನ ಶುಲ್ಕ, ವಿದ್ಯುತ್ ಶುಲ್ಕ ಹಾಗೂ ನಿರ್ವಹಣೆ ವೆಚ್ಚವನ್ನು ಎರಡನೇ ವ್ಯಕ್ತಿಯೇ ಭರಿಸಬೇಕಾಗುತ್ತದೆ.

5. ಸದರಿ ಕಟ್ಟಡವನ್ನು ಯಾವುದೇ ಮೂರನೇ ವ್ಯಕ್ತಿಗೆ ಉಪಗುತ್ತಿಗೆ ಅಥವಾ ಬಾಡಿಗೆ ಆಧಾರದಲ್ಲಿ ನೀಡುವಂತಿಲ್ಲ.

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಮೈಸೂರು ಜಿಲ್ಲೆ-570005

6. ಷೆಡ್ಯೂಲ್ ಸ್ವತ್ತು ಪಾರಂಪರಿಕ ಕಟ್ಟಡವಾಗಿರುವುದರಿಂದ ಕಟ್ಟಡದ ಮೂಲ ಸ್ವರೂಪಕ್ಕೆ ಯಾವುದೇ ಧಕ್ಕೆಯಾಗದಂತೆ ಒಳಗಡೆ ಅಗತ್ಯವಿರುವ ವಿದ್ಯುತ್ ಪಾಯಿಂಟ್ ಮತ್ತು ಸ್ಯಾನಟರಿ ವ್ಯವಸ್ಥೆಯನ್ನು ಎರಡನೇ ವ್ಯಕ್ತಿಯು ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿಕೊಳ್ಳುವುದು.

7. ಮೊದಲನೇ ವ್ಯಕ್ತಿಯ ಪೂರ್ವಾನುಮತಿ ಇಲ್ಲದೇ ಎರಡನೇ ವ್ಯಕ್ತಿಯು ಕಟ್ಟಡದಲ್ಲಿ ಯಾವುದೇ ಶಾಶ್ವತ ರಚನಾತ್ಮಕ ಬದಲಾವಣೆಯನ್ನು ಮಾಡಬಾರದು. ಆದರೆ ತಾತ್ಕಾಲಿಕವಾಗಿ ಬೇಕಾದ ಪಾರ್ಟೀಷಿಯನ್, ಕ್ಯಾಬಿನ್ಸ್, ಕೌಂಟರ್ಸ್, ಫಾಲ್ಸ್ ಸೀಲಿಂಗ್, ಶೌಚಾಲಯ ಹಾಗೂ ಇತರೆ ಕಚೇರಿ ಪರಿಕರಗಳನ್ನು ಅಳವಡಿಸಲು ಎರಡನೇ ವ್ಯಕ್ತಿಯು ಮೊದಲನೇ ವ್ಯಕ್ತಿಯ ಅನುಮತಿ ಪಡೆಯುವ ಅವಶ್ಯಕತೆ ಇರುವುದಿಲ್ಲ.

8. ಮುಂದುವರೆದು ಈ ರೀತಿ ಕಾರ್ಯಕೈಗೊಂಡ ಸಂದರ್ಭದಲ್ಲಿ ಕಟ್ಟಡದ ಮೂಲ ಸ್ವರೂಪಕ್ಕೆ ಯಾವುದೇ ರೀತಿ ಧಕ್ಕೆಯಾಗದಂತೆ ಜವಬ್ದಾರಿಯುತವಾಗಿ ನಿರ್ವಹಿಸಬೇಕು.

9. ಮೇಲ್ಕಂಡಂತೆ ಎಲೆಕ್ಟ್ರಿಕಲ್, ವೈರಿಂಗ್, ಕಚೇರಿ ಪೀಠೋಪಕರಣ ಹಾಗೂ ಇತರೆ ಯಾವುದೇ ಕೆಲಸಗಳಿಗೆ ತಗಲುವ ವೆಚ್ಚಗಳನ್ನು ಎರಡನೇ ವ್ಯಕ್ತಿಯೇ ಭರಿಸಬೇಕಾಗುತ್ತದೆ.

10. ಒಡಂಬಡಿಕೆ ಅವಧಿ ಮುಗಿಯುವವರೆಗೆ ಒಡಂಬಡಿಕೆಯಲ್ಲಿ ನಮೂದಿಸಿರುವಂತೆ ಸಂಪೂರ್ಣ ಕಟ್ಟಡದ ನಿರ್ವಹಣೆ ಮತ್ತು ಭದ್ರತೆ ಜವಬ್ದಾರಿಯನ್ನು ಎರಡನೇ ವ್ಯಕ್ತಿಯೇ ನಿರ್ವಹಿಸಬೇಕಾಗಿರುತ್ತದೆ.

11. ಪ್ರಸ್ತುತ ಷೆಡ್ಯೂಲ್ ಸ್ವತ್ತಿನಲ್ಲಿರುವ ವಸ್ತು ಸಂಗ್ರಹಾಲಯವನ್ನು ಹಾಗೆಯೇ ಉಳಿಸಿಕೊಂಡು ನಿರ್ವಹಣೆ ಮಾಡುವುದು ಮತ್ತು ಇದರ ಸಾರ್ವಜನಿಕರ ವೀಕ್ಷಣೆಗೆ ವಿಧಿಸಿದ ಮೊತ್ತದ ಶುಲ್ಕವನ್ನು ಮೊದಲನೆಯ ಪಾರ್ಟಿ ಅನುಮೋದನೆಯೊಂದಿಗೆ ನಿಗದಿಪಡಿಸಬಹುದು. ಮುಂದುವರೆದು ಈ ಹಣವನ್ನು ಸಂಪೂರ್ಣವಾಗಿ ಜಯಲಕ್ಷ್ಮಿವಿಲಾಸ ಅರಮನೆಯ ಕಟ್ಟಡದ ಮತ್ತು ಆವರಣದ ನಿರ್ವಹಣೆಗೆ ಬಳಸುವುದು ಹಾಗೂ ಇದರ ಖರ್ಚು - ವೆಚ್ಚಗಳನ್ನು ನಿರ್ವಹಣೆ ಮಾಡುವುದು.

12. ಎರಡನೇ ವ್ಯಕ್ತಿಯು ಕರಾರಿನ ಅವಧಿ ವಿಸ್ತರಿಸಲು ಬಯಸಿದ್ದಲ್ಲಿ ಒಡಂಬಡಿಕೆಯ ನವೀಕರಣಕ್ಕಾಗಿ ಈ ಒಡಂಬಡಿಕೆಯ ಅವಧಿ ಮುಗಿದ ನಂತರ ನವೀಕರಣಕ್ಕಾಗಿ ವಿಶ್ವವಿದ್ಯಾನಿಲಯಕ್ಕೆ ಪ್ರಸ್ತಾವನೆ ಸಲ್ಲಿಸಬಹುದು.

13. ಕನ್ನಡ ಭಾಷೆಯ ಅತ್ಯುನ್ನತ ಅಧ್ಯಯನ ಕೇಂದ್ರದ ಮೇಲ್ವಿಚಾರಣೆ ಕರ್ನಾಟಕ ರಾಜ್ಯ ಸರ್ಕಾರದ್ದಾಗಿರುತ್ತದೆ. ಸರ್ಕಾರದ ಪರವಾಗಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ತನ್ನ ಮೈಸೂರು ಜಿಲ್ಲಾ ಸಹಾಯಕ ನಿರ್ದೇಶಕರ ಮುಖೇನ ಈ ಅಧ್ಯಯನ ಕೇಂದ್ರದ ಸಂಪೂರ್ಣ ಮೇಲ್ವಿಚಾರಣೆ ಮಾಡುತ್ತದೆ.

14. ಕನ್ನಡ ಭಾಷೆಯ ಅತ್ಯುನ್ನತ ಅಧ್ಯಯನ ಕೇಂದ್ರದ ನಿರ್ವಹಣೆಗೆ ಸರ್ಕಾರದ ಪೂರ್ವಾನುಮತಿಯನ್ನು ಪಡೆದು ರಾಷ್ಟ್ರೀಯ, ಬಹುರಾಷ್ಟ್ರೀಯ, ಅಂತರಾಷ್ಟ್ರೀಯ ಸಂಸ್ಥೆಗಳು ಮತ್ತು ಗಣ್ಯರ ಸಹಾಯ ಮತ್ತು ಸಹಕಾರ ಪಡೆಯಬಹುದಾಗಿದೆ.

15. ಈ ಕರಾರನ್ನು ಕಾರ್ಯಗತಗೊಳಿಸುವುದರಲ್ಲಿ ಅಥವಾ ಕರಾರನ್ನು ಅಥವಾ ಇದರ ಯಾವುದೇ ಭಾಗವನ್ನು ಅರ್ಥೈಸುವುದರಲ್ಲಿ ಎರಡು ಪಕ್ಷಗಳ ಒಳಗೆ ವಿವಾದ ಭಿನ್ನಾಭಿಪ್ರಾಯವುಂಟಾದರೆ ಅಂತಹ ವಿವಾದ ಅಥವಾ ಭಿನ್ನಾಭಿಪ್ರಾಯವನ್ನು ಅರ್ಬಿಟೇಷನ್ ಅಂಡ್ ಕನ್ಸಿಲಿಯೇಷನ್ ಆಕ್ಟ್ 1996 ನಿಯಮಾನುಸಾರ ಮಧ್ಯಸ್ಥಿಕೆ

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು



ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಮೈಸೂರು ಜಿಲ್ಲೆ-570005

ವ್ಯವಹರಣೆಯ ಮೂಲಕ ಇತ್ಯರ್ಥ ಮಾಡಿಕೊಳ್ಳತಕ್ಕದ್ದೆಂದೂ ಮತ್ತು ಈ ಕರಾರಿಗೆ ಸಂಬಂಧಿಸಿದ ಎಲ್ಲಾ ವಿವಾದಗಳ ತನಿಖೆ ಮತ್ತು ಇತ್ಯರ್ಥ ಮಾಡಲು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅವರ ಇತ್ಯರ್ಥಕ್ಕೆ ಒಳಪಡಿಸಲು ಎರಡು ಪಕ್ಷಗಳು ಈ ಮೂಲಕ ಒಪ್ಪಿಕೊಂಡಿರುತ್ತಾರೆ.

16. ಈ ಒಡಂಬಡಿಕೆ ಕರಾರನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಸಮಾಲೋಚನೆ ಅಗತ್ಯವಾದರೆ ಅಥವಾ ವಿವಾದಗಳು ಉಂಟಾದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ಜಿಲ್ಲೆಯ ಸಹಾಯಕ ನಿರ್ದೇಶಕರು ಅಥವಾ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳು ಅಥವಾ ಕುಲಸಚಿವರು ಈ ಎರಡು ಪಕ್ಷದವರು ಸೇರಿ ಇತ್ಯರ್ಥಪಡಿಸಿಕೊಳ್ಳುವುದು.

17. ಈ ಒಡಂಬಡಿಕೆ ಎರಡು ಪ್ರತಿಯಲ್ಲಿ ತಯಾರಿಸಿದ್ದು ಎರಡೂ ಪಕ್ಷವು ಒಂದೊಂದು ಪ್ರತಿ ಹೊಂದಿದ್ದು ಎರಡು ಪ್ರತಿಗಳನ್ನು ಮೂಲ ಒಡಂಬಡಿಕೆ ಎಂಬುದಾಗಿ ಪರಿಗಣಿಸತಕ್ಕದ್ದು. ಉಭಯತ್ರಯರು ಈ ಒಡಂಬಡಿಕೆಯ ಅನುಷ್ಠಾನದ ಅವಧಿಯಲ್ಲಿ ಪೂರಕ ಒಡಂಬಡಿಕೆಗಳನ್ನು ಮಾಡಿಕೊಳ್ಳುವ ಅಧಿಕಾರ ಹೊಂದಿರುತ್ತಾರೆ. ಅಂತಹ ಪೂರಕ ಒಡಂಬಡಿಕೆಗಳೂ ಸಹ ಮೂಲ ಒಡಂಬಡಿಕೆಯ ಭಾಗವಾಗಿರುತ್ತದೆ.

18. ಪ್ರಸ್ತುತ ಜಯಲಕ್ಷ್ಮಿವಿಲಾಸ ಕಟ್ಟಡದಲ್ಲಿ ವಸ್ತುಸಂಗ್ರಹಾಲಯವಿದ್ದು ಸದರಿ ವಸ್ತು ಸಂಗ್ರಹಾಲಯದ ಕಲಾಕೃತಿ ಪಟ್ಟಿ ದಾಖಲಾಗಿದ್ದು, ( ಅಡಕ-1 ರಲ್ಲಿ ಪ್ರತ್ಯೇಕ ಪಟ್ಟಿಯನ್ನು ಲಗತ್ತಿಸಲಾಗಿದೆ) ಈ ಎಲ್ಲಾ ಕಲಾಕೃತಿಗಳ ನಿರ್ವಹಣೆ ಮತ್ತು ಜವಬ್ದಾರಿಯು ಎರಡನೇ ಪಾರ್ಟಿಯವರದ್ದಾಗಿರುತ್ತದೆ ಮತ್ತು ಯಾವುದೇ ಕಾರಣಕ್ಕೂ ಕಲಾಕೃತಿಗಳಿಗೆ ಹಾನಿಯಾಗದ ರೀತಿಯಲ್ಲಿ ಸಂರಕ್ಷಿಸುವುದು ಎರಡನೇ ಪಕ್ಷಕಾರರ ಜವಾಬ್ದಾರಿಯಾಗಿರುತ್ತದೆ. ಒಡಂಬಡಿಕೆ ಚಾಲ್ತಿಯಲ್ಲಿರುವ ಸಂದರ್ಭದಲ್ಲಿ ಯಾವುದೇ ಕಲಾಕೃತಿಗೆ ಹಾನಿ/ನಷ್ಟ ಅಥವಾ ಕಾಣೆಯಾದರೆ ಅದರ ಸಂಪೂರ್ಣ ಜವಾಬ್ದಾರಿ ಎರಡನೇ ಪಕ್ಷಕಾರರದ್ದಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕಲಾಕೃತಿಯ ನಷ್ಟ/ಹಾನಿಯ ಅಥವಾ ಕಳುವಿನ ಸಂಪೂರ್ಣ ಮೊತ್ತವನ್ನು ಎರಡನೇ ಪಕ್ಷಕಾರರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೀಡಲು ಬದ್ಧರಾಗಿರುತ್ತಾರೆ. ಪ್ರತಿ ವರ್ಷ ಏಪ್ರಿಲ್ ಮಾಹೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಾಗೂ ವಿಶ್ವವಿದ್ಯಾಲಯದ ಪ್ರತಿನಿಧಿಗಳನ್ನೊಳಗೊಂಡಂತೆ ಜಂಟಿಯಾಗಿ ವಸ್ತುಸಂಗ್ರಾಲಯದಲ್ಲಿರುವ ಕಲಾಕೃತಿಗಳನ್ನು ಪರಿಶೀಲಿಸಿ ನಿರ್ವಹಣೆಗಾಗಿ ಅಗತ್ಯ ಕ್ರಮ ಕೈಗೊಳ್ಳುವುದು.

19. ಈ ಒಡಂಬಡಿಕೆಯನ್ನು ಮೈಸೂರು ವಿಶ್ವವಿದ್ಯಾನಿಲಯವು ಮೂರು ತಿಂಗಳುಗಳ ಮುಂಚಿತವಾಗಿ ಸೂಕ್ತ ತಿಳುವಳಿಕೆಯನ್ನು ನೀಡಿ ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ. ಅಂತಹ ಸಂದರ್ಭದಲ್ಲಿ ಎರಡನೇ ಪಾರ್ಟಿಯವರು ಅನುಭವಿಸುವ ನಷ್ಟಗಳಿಗೆ ಮೈಸೂರು ವಿಶ್ವವಿದ್ಯಾನಿಲಯವು ಬಾಧ್ಯವಾಗಿರುವುದಿಲ್ಲ.

20. ಈ ಒಡಂಬಡಿಕೆ ಕರ್ನಾಟಕ ಸಾರ್ವಜನಿಕ ಸ್ಥಳಗಳ (ಅನಧಿಕೃತ ಅನುಭವದಾರರ ಒತ್ತುವರಿ) ಅಧಿನಿಯ 1974 ರ ನಿಯಮಗಳ ಅಡಿಯಲ್ಲಿ ಕಾರ್ಯನಿರ್ವಹಿಸುವುದು.

21. ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡದಲ್ಲಿರುವ ಜಾನಪದ ವಸ್ತು ಸಂಗ್ರಹಾಲಯವು ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿಯೇ ಇರುತ್ತದೆ ಮತ್ತು ಕಟ್ಟಡದ ಸ್ಥಿರಾಸ್ತಿ-ಚರಾಸ್ತಿ ಮೈಸೂರು ವಿಶ್ವವಿದ್ಯಾನಿಲಯದ ಒಡೆತನದಲ್ಲಿರುತ್ತದೆ.

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು



ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಮೈಸೂರು ಜಿಲ್ಲೆ-570005

<u>ಜಯಲಕ್ಷ್ಮಿ ವಿಲಾಸ ಅರಮನೆಯ ಷೆಡ್ಯೂಲ್ ಸ್ವತ್ತು</u>

ಮೈಸೂರು ವಿಶ್ವವಿದ್ಯಾನಿಲಯವು ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಸ್ವಾಯತ್ತ ಸಂಸ್ಥೆಯಾಗಿ ರೂಪಿಸಿಕೊಳ್ಳಲು ಒಡಂಬಡಿಕೆ ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನೀಡುತ್ತಿರುವ ಮಾನಸ ಗಂಗೋತ್ರಿಯಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎದುರಿನ ಆವರಣದಲ್ಲಿರುವ ಜಯಲಕ್ಷ್ಮಿ ವಿಲಾಸ ಅರಮನೆಯ ಕಟ್ಟಡ (ಬ್ಲಾಕ್ 1, 2 ಮತ್ತು 3 ಸೇರಿದಂತೆ) ಅಧ್ಯಯನಕ್ಕಾಗಿ ಮೀಸಲಿಟ್ಟಿರುವ ನಿಗಧಿತ ಆವರಣ ಮಾತ್ರವೇ ಈ ಒಡಂಬಡಿಕೆಗೆ ಅನ್ವಯವಾಗುವ ಷೆಡ್ಯೂಲ್ ಸ್ವತ್ತು.

<u>ಚೆಕ್ಕುಬಂದಿ</u>

| | | |
|---|---|---|
| ಪೂರ್ವ | : | ರಸ್ತೆ |
| ಪಶ್ಚಿಮ | : | ರಸ್ತೆ |
| ಉತ್ತರ | : | ರಸ್ತೆ |
| ದಕ್ಷಿಣ | : | ಜಾನಪದ ವಸ್ತುಸಂಗ್ರಹಾಲಯ ಮತ್ತು ಪುರಾತತ್ವ ವಿಭಾಗ |

21/02/2023      21.02.22

ಮೈಸೂರು ವಿಶ್ವವಿದ್ಯಾನಿಲಯದ ಪರವಾಗಿ
ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಕರ್ನಾಟಕ ಸರ್ಕಾರದ ಪರವಾಗಿ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು
ಇವರ ಪ್ರತಿನಿಧಿಯಾಗಿ
ಸಹಾಯಕ ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಮೈಸೂರು
ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಮೈಸೂರು ಜಿಲ್ಲೆ-570005

ಸಾಕ್ಷಿಗಳು

1. ಶ್ರೀ. ವಿಜಯಕುಮಾರಿ ಎಸ್. ಕರಿಕಲ್.
ಮೇಲ್ವಿಚಾರಕರು
ವಸ್ತುಸಂಗ್ರಹಾಲಯ ಜಯಲಕ್ಷ್ಮಿ ವಿಲಾಸ ಅರಮನೆ
ಮೈಸೂರು

2. Prof. S. C. JAYARAMU
EO, CCOM

ಸ್ವಾತಂತ್ರ್ಯದ
ಅಮೃತ ಮಹೋತ್ಸವ

ಕರ್ನಾಟಕ ಸರ್ಕಾರ
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
**ಸಹಾಯಕ ನಿರ್ದೇಶಕರ ಕಚೇರಿ, ಕರ್ನಾಟಕ ಕಲಾಮಂದಿರ, ವಿನೋಭಾ ರಸ್ತೆ, ಮೈಸೂರು – 570 005**
**ಮಿಂಚಂಚೆ: dkc.mysuru@gmail.com** **ದೂರವಾಣಿ: 0821-2513225**

ಸಂ: ಸನಿ/ಕಸಂಇ/ಮೈಜಿ/ಕ.ಶಾ.ಭಾ.ಅ.ಕೇ/2022-23 ದಿನಾಂಕ : 22-02-2023

ಮಾನ್ಯ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು 02

**ಮಾನ್ಯರೆ,**

**ವಿಷಯ** : ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಆವರಣದಲ್ಲಿರುವ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡವನ್ನು ಕನ್ನಡ ಭಾಷೆಯ ಅತ್ಯುನ್ನತ ಅಧ್ಯಯನ ಕೇಂದ್ರ ಸ್ಥಾಪನೆಗೆ ನೆರವಾಗುವಂತೆ ಒಡಂಬಡಿಕೆ ಮಾಡಿಕೊಂಡಿರುವ ಬಗ್ಗೆ

**ಉಲ್ಲೇಖ** : ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಕೆಸಿ-21011/5/2015 ದಿನಾಂಕ: 08-12-2022

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಆವರಣದಲ್ಲಿರುವ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡವನ್ನು ಕನ್ನಡ ಭಾಷೆಯ ಅತ್ಯುನ್ನತ ಅಧ್ಯಯನ ಕೇಂದ್ರ ಸ್ಥಾಪನೆಗೆ ನೆರವಾಗುವಂತೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡುವಣ ಒಡಂಬಡಿಕೆಯನ್ನು ಮಾಡಿಕೊಂಡು ಸಹಿಯಾದ ಪ್ರತಿಯನ್ನು ಕಳುಹಿಸಿಕೊಡಲು ಸೂಚಿಸಲಾಗಿತ್ತು.

ಈ ಮೇರೆಗೆ ಮೇಲೆ ಪ್ರಸ್ತಾಪಿಸಿದ ಒಡಂಬಡಿಕೆಯನ್ನು ದಿನಾಂಕ: 21-02-2023ನೇ ಇಸವಿಯಂದು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಈ ಸಂಸ್ಥೆಯನ್ನು ಪ್ರತಿನಿಧಿಸುವ ಕುಲಸಚಿವರು ಇವರು ಒಂದನೆ ಪಕ್ಷವಾಗಿಯೂ ಮತ್ತು ಕರ್ನಾಟಕ ಸರ್ಕಾರದ ಪರವಾಗಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಪರವಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ಇವರು ಎರಡನೇ ಪಕ್ಷವಾಗಿಯೂ ಉಲ್ಲೇಖಿತ ಪತ್ರದೊಂದಿಗೆ ಲಗತ್ತಿಸಲಾಗಿದ್ದ ಕರಡು ಒಡಂಬಡಿಕೆ ಅನುಸಾರ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ (ಸಹಿಯಾದ ಮೂಲಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ).

ಮುಂದುವರೆದು, ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡವನ್ನು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಂದ ಇಲಾಖೆಗೆ ಹಸ್ತಾಂತರ ಪಡೆಯುವ ಸಂಬಂಧ ಮುಂದಿನ ನಿರ್ದೇಶನ ಕೋರಿದೆ.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ,**

12.02.22

**(ಡಾ.ಎಂ.ಡಿ.ಸುದರ್ಶನ್)**
ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಮೈಸೂರು ಜಿಲ್ಲೆ, ಮೈಸೂರು

**ಪ್ರತಿಯನ್ನು**:

1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಕಚೇರಿ ಕಡತಕ್ಕೆ

ಸಹಾಯಕ ನಿರ್ದೇಶಕರ ಕಛೇರಿ ★ ಕನ್ನಡ ಮತ್ತು ಸಂಸ್ಕೃತಿ ಇಲಾಖೆ
218
ಮೈಸೂರು

ಜಂಟಿ ನಿರ್ದೇಶಕರ ಕಚೇರಿ ★
ನಂ..................
ತಾ:..................
ಕರ್ನಾಟಕ ಕಲಾಮಂದಿರ
ಮೈಸೂರು

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - 560 002
ದೂರವಾಣಿ: 080-22213530/22275540 ಫ್ಯಾಕ್ಸ್: 080-22214379 ಇ-ಮೇಲ್: kanbhavblr@gmail.com ವೆಬ್ ಸೈಟ್ : www.kannadasiri.co.in

DKC-21011/5/2015 ದಿನಾಂಕ:27.06.2023

ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ವಿಕಾಸಸೌಧ ಬೆಂಗಳೂರು.

ಮಾನ್ಯರೆ,

ವಿಷಯ : ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿ ಆವರಣದಲ್ಲಿರುವ 'ಜಯಲಕ್ಷ್ಮಿವಿಲಾಸ ಅರಮನೆ' ಕಟ್ಟಡವನ್ನು ಒಡಂಡಿಕೆಯನುಸಾರ ರಾಜ್ಯ ಸರ್ಕಾರದ ವಶಕ್ಕೆ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ) ಪಡೆಯುವ ಕುರಿತು

ಉಲ್ಲೇಖ : 1. ಸಮಸಂಖ್ಯೆಯ ಪತ್ರ ದಿನಾಂಕ ದಿ:08.12.2022
2. ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ಜಿಲ್ಲೆ ಇವರ ಪತ್ರ ಸಂಖ್ಯೆ ಸನಿ:ಕಸಂಇ:ಮೈಜಿ:ಕ.ಶಾ.ಭಾ.ಅ.ಕೇ:2022-23, ದಿ:22.02.2023

++++++++++

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರದ ಕಚೇರಿ ತೆರೆಯಲು'ಜಯಲಕ್ಷ್ಮಿ ವಿಲಾಸ ಅರಮನೆ' ಕಟ್ಟಡವನ್ನು ಎಂ.ಒ.ಯು (ಒಡಂಬಡಿಕೆ) ಮೂಲಕ ರಾಜ್ಯ ಸರ್ಕಾರದ ವಶಕ್ಕೆ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ) ಪಡೆಯುವ ಸಂಬಂಧ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಒಡಂಬಡಿಕೆಯಲ್ಲಿ ಇರಬೇಕಾದ ಹಾಗೂ ಕೈಬಿಡಬೇಕಾದ ಅಂಶಗಳ ಬಗ್ಗೆ ತಿಳಿಸಿ ಒಡಂಬಡಿಕೆಯನ್ನು ಸಹಿಮಾಡಲು ಇಲಾಖೆಯಿಂದ ಕಳುಹಿಸಿಕೊಡಲಾದ ಏಕಕಡತ ಸಂಖ್ಯೆ DKC-21011/5/2015 (com 960) ರ ಕಂಡಿಕೆ (87) ರಲ್ಲಿ ಅನುಮೋದನೆ ನೀಡಿರುತ್ತಾರೆ. ಅದರಂತೆ ಕ್ರಮವಹಿಸಲು ತಿಳಿಸಿ ಉಲ್ಲೇಖ (1)ರಲ್ಲಿ ಜಂಟಿ ನಿರ್ದೇಶಕರು, ಮೈಸೂರು ಇವರಿಗೆ ಪತ್ರ ಕಳುಹಿಸಿಕೊಡಲಾಗಿರುತ್ತದೆ.

ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ಜಿಲ್ಲೆ ಇವರು ಉಲ್ಲೇಖ(2)ರ ಪತ್ರದಲ್ಲಿ ದಿ:21.02.2023ರಂದು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಸಂಸ್ಥೆಯನ್ನು ಪ್ರತಿನಿಧಿಸುವ ಕುಲಸಚಿವರು ಒಂದನೆ ಪಕ್ಷವಾಗಿಯೂ ಮತ್ತು ಕರ್ನಾಟಕ ಸರ್ಕಾರದ ಪರವಾಗಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಪರವಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ಇವರು ಎರಡನೇ ಪಕ್ಷವಾಗಿಯೂ ಕೇಂದ್ರ ಕಚೇರಿಯಿಂದ ಕಳುಹಿಸಿಕೊಡಲಾದ ಕರಡು ಒಡಂಬಡಿಕೆ ಅನುಸಾರ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ ಎಂದು ತಿಳಿಸಿ ಸಹಿಯಾದ ಒಡಂಬಡಿಕೆ ಪ್ರತಿಯನ್ನು ಕಳುಹಿಸಿ, 'ಜಯಲಕ್ಷ್ಮೀವಿಲಾಸ ಅರಮನೆ' ಕಟ್ಟಡವನ್ನು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಂದ ಇಲಾಖೆಗೆ ಹಸ್ತಾಂತರ ಪಡೆಯುವ ಸಂಬಂಧ ಮುಂದಿನ ನಿರ್ದೇಶನ ಕೋರಿರುತ್ತಾರೆ(ಪ್ರತಿ ಲಗತ್ತಿಸಿದೆ)

ಈ ಮೇರೆಗೆ ಒಡಂಡಿಕೆ ಪ್ರತಿಯನ್ನು ಈ ಪತ್ರದೊಂದಿಗೆ ಅವಗಾಹನೆಗೆ ಕಳುಹಿಸಿಕೊಡುತ್ತಾ ಒಡಂಬಡಿಕೆಯನುಸಾರ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಂದ 'ಜಯಲಕ್ಷ್ಮೀವಿಲಾಸ ಅರಮನೆ' ಕಟ್ಟಡವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಸ್ತಾಂತರಿಸಿ ಕೊಳ್ಳಬಹುದಾಗಿದ್ದು, ಈ ಬಗ್ಗೆ ಸರ್ಕಾರದ ಅನುಮೋದನೆ ಕೋರಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಕರಡು ನಿರ್ದೇಶಕರಿಂದ ಅನುಮೋದನೆಗೊಂಡಿದೆ

ಪ್ರತಿ:
1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಕ್ರಾಫರ್ಡ್ಭವನ, ವಿಶ್ವವಿದ್ಯಾನಿಲಯ ಕಾರ್ಯಸೌಧ, ಕೆ.ಜಿ ಕೊಪ್ಪಳ, ಸರಸ್ವತಿಪುರಂ, ಮೈಸೂರು- 570005

2. ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ವಿಭಾಗ, ಮೈಸೂರು ಜಿಲ್ಲೆ
3. ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ವಿಭಾಗ, ಮೈಸೂರು ಜಿಲ್ಲೆ
4. ಕಡತಕ್ಕೆ

ಕರ್ನಾಟಕ ಸರ್ಕಾರ

[illegible] 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:08.09.2023

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ,
ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು.

ಮಾನ್ಯರೆ,

ವಿಷಯ : ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿ ಆವರಣದಲ್ಲಿರುವ "ಜಯಲಕ್ಷ್ಮಿ ವಿಲಾಸ ಅರಮನೆ" ಕಟ್ಟಡವನ್ನು ಒಡಂಬಡಿಕೆಯಾನುಸಾರ ರಾಜ್ಯ ಸರ್ಕಾರದ ವಶಕ್ಕೆ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ) ಪಡೆಯುವ ಬಗ್ಗೆ.

ಉಲ್ಲೇಖ: ತಮ್ಮ ಕಛೇರಿಯ ಪತ್ರ ಸಂಖ್ಯೆ: ಡಿಕೆಸಿ-21011/5/2015 ದಿನಾಂಕ: 27.06.2023

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರ ಕಛೇರಿ ತೆರೆಯಲು ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿ ಆವರಣದಲ್ಲಿರುವ "ಜಯಲಕ್ಷ್ಮಿ ವಿಲಾಸ ಅರಮನೆ" ಕಟ್ಟಡವನ್ನು ಒಡಂಬಡಿಕೆ (ಎಂ.ಓ.ಯು) ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಶಕ್ಕೆ ಪಡೆಯಲು ಅನುಮತಿ ನೀಡಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
ಕೆ. ಆರ್. ರಮೇಶ್ 08/09
(ಕೆ.ಆರ್.ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
(ಆಡಳಿತ ಕನ್ನಡ)